ಸಭೆಯು ಮತ್ತೆ 3–25 ನಿಮಿಷಕ್ಕೆ ಸಮಾವೇಶಗೊಂಡಿತು

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸದನವನ್ನು ಇವತ್ತೇ ಮುಗಿಸುತ್ತೀರೋ ಅಥವಾ ಹೇಗೆ ಎಂಬುದನ್ನು ತಿಳಿಸಲಿಲ್ಲ.

ಅಧ್ಯಕ್ಷರು: ಮುಖ್ಯಮಂತ್ರಿಯವರು ಬಂದಿಲ್ಲ. ಅವರು ಬಂದ ಮೇಲೆ ಮಾತನಾಡುತ್ತೇನೆ.

8. ಸಂದೇಶ

2007ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೇ ಕರ್ನಾಟಕ ವಿಧಾನಪರಿಷತ್ತು ಅಂಗೀಕರಿಸಿರುವ ಬಗ್ಗೆ.

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಿಯಮ 118ರ ಮೇರೆಗೆ ವಿಧಾನ ಪರಿಷತ್ತು "2007ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ದಿನಾಂಕ 2ನೇ ಆಗಸ್ಟ್ ರಂದು ಯಾವುದೇ ತಿದ್ದುಪಡಿಗಳು ಇಲ್ಲದೆಯೇ ಅಂಗೀಕರಿಸಲಾಗಿದೆ." ಎಂದು ತಿಳಿಸುತ್ತಾರೆ.

9. ವರದಿಯನ್ನೊಪ್ಪಿಸುವುದು

ಅಧೀನ ಶಾಸನ ಸಮಿತಿಯ 36ನೇ ವರದಿ.

ಅಧ್ಯಕ್ಷರು: ಎನ್. ಯೋಗೀಶ್ ಭಟ್, ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ ಇವರ ಹೆಸರಿನಲ್ಲಿರತಕ್ಕ "2006–07ನೇ ಸಾಲಿನ ಅಧೀನ ರಚನಾ ಸಮಿತಿಯು 36ನೇ ವರದಿ" ಯನ್ನು ಒಪ್ಪಿಸುತ್ತೇನೆ..

10. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು : ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು

ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ. ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ " 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು" ಸಭೆಯ ಮುಂದಿಡುತ್ತೇನೆ.

ಅಪರ ಕಾರ್ಯದರ್ಶಿ, ವಿಧಾನ ಸಭೆ: ಗೌರವಾನ್ವಿತ ಅಧ್ಯಕ್ಷರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯ ವಿಧೇಯಕವನ್ನು ಪರಿಶೀಲಿಸಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು" ಸಭೆಯ ಮುಂದಿಡುತ್ತಿದ್ದೇನೆ.

11.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ: ಹಜ್ ಯಾತ್ರೆಗೆ ಹೋಗುತ್ತಿರುವವರ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ರಾಷ್ಟ್ರದಿಂದ ಹಜ್‌ಗೆ ಯಾತ್ರಿಗಳು ಹೋಗುತ್ತಾರೆ. ಅದರಲ್ಲಿ ರಾಜ್ಯಗಳಿಗೆ quota ಗಳನ್ನು ನಿರ್ಧಾರ ಮಾಡಿರುತ್ತಾರೆ. State quota ದಲ್ಲಿ ಏನಾದರೂ required number ಗಿಂತ ಜಾಸ್ತಿ ಬಂದರೆ ಖುರಾ ಪ್ರಕಾರ, ಲಾಟರಿ ಪ್ರಕಾರ ಆಯ್ಕೆ ಮಾಡಬೇಕೆಂದು central committee ಯ ಆದೇಶ ಇದೆ. ಅದಕ್ಕೆ ಒಂದು ನಿಯಮ ಮಾಡಿಕೊಂಡಿದ್ದಾರೆ. ಅದನ್ನು ಮಾಡುವ ಕಾಲದಲ್ಲಿ ಎರಡು software ಗಳನ್ನು develop ಮಾಡಿದ್ದಾರೆ. central committee ನಲ್ಲಿ ಒಂದು ಇಲ್ಲಿ ಮತ್ತೊಂದು software ಇರುತ್ತದೆ. ಅದು ಏಕೆ ಇರುತ್ತದೆ ಎಂದರೆ ಒಂದು ಸಲ ಆಯ್ಕೆಯಾದವರು ಮತ್ತೊಂದು ಸಲ ಹೋಗಬಾರದು, ಸರ್ಕಾರದ ಹಣವನ್ನು ಬಳಸಬಾರದು ಎಂಬುದು ಒಂದು. ಎರಡನೆಯದು, ಅವರು ಒಂದು ನಿಯಮ ಮಾಡಿಕೊಂಡಿದ್ದಾರೆ. 75 ವರ್ಷ ಆದವರು ಯಾರಾದರೂ ಹಜ್‌ಗೆ ಹೋಗುತ್ತೇನೆ ಎಂದು ಮುಂದೆ ಬಂದರೆ ಅವರನ್ನು ಈ ಖುರಾದಿಂದ ಅಂದರೆ ಲಾಟರಿಯಿಂದ ಆಚೆ ಇಟ್ಟು ಆಯ್ಕೆ ಮಾಡಬೇಕು ಮತ್ತು ಅವರ ಜೊತೆ ಇಬ್ಬರು attendants ನ್ನು ಕಳುಹಿಸಬೇಕು ಎಂದು ನಿಯಮ ಇದೆ. ಕರ್ನಾಟಕದಲ್ಲಿ ಏನಾಗಿದೆ ಎಂದರೆ ಆ central committee ನವರು ನಿಗದಿ ಮಾಡಿರುವ software ನ್ನು ಅಳವಡಿಸಿಕೊಳ್ಳದೇ, ಇವರೇ